512 ಶ್ರೀ ಸುರೇಶ್ ಬಾಬು ಸಿ.ಬಿ. : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕೃಷಿ ಇಲಾಖೆಯಲ್ಲಿ ರೈತರಿಗಾಗಿ ಪರಿಚಯಿಸಲಾಗಿರುವ ವಿವಿಧ ಯೋಜನೆಗಳು ಯಾವುವು;

ಆ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳಲ್ಲಿ ರೈತರಿಗೆ ಸವಲತ್ತು ನೀಡಲಾಗಿರುವ ಯೋಜನೆಗಳಾವುವು; (ಯೋಜನೆವಾರು ಫಲಾನುಭವಿಗಳ ವಿವರ ನೀಡುವುದು)

ಇ) ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷದ ಅವಧಿಯಲ್ಲಿ ಟಿಲ್ಲರ್ ಮತ್ತು ಟ್ರಾಕ್ಟರ್‌ಗಳ ಖರೀದಿಗೆ ಸಹಾಯಧನ ಪಡೆದಿರುವ ರೈತರು ಎಷ್ಟು; (ಮಾಹಿತಿ ಒದಗಿಸುವುದು)?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು):

ಅ) 2009-10ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಪರಿಚಯಿಸಲಾಗಿರುವ ವಿವಿಧ ಯೋಜನೆಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಆ) 2007-08 ಮತ್ತು 2008-09ನೇ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ರೈತರಿಗೆ ಸವಲತ್ತು ನೀಡಲಾದ ಯೋಜನೆಗಳು ಮತ್ತು ಯೋಜನಾವಾರು ಫಲಾನುಭವಿಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಇ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷದ ಅವಧಿಯಲ್ಲಿ ಟಿಲ್ಲರ್ ಮತ್ತು ಟ್ರಾಕ್ಟರ್‌ಗಳ ಖರೀದಿಗೆ ಸಹಾಯಧನ ಪಡೆದಿರುವ ರೈತರುಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ.ಸಂ.	ವರ್ಷ	ಪವರ್ ಟಿಲ್ಲರ್‌ಗಳು	ಟ್ರಾಕ್ಟರ್‌ಗಳು
1	2006-07	17	20

2	2007–08	30	10
3	2008–09	2	70
	ಒಟ್ಟು	**49**	**100**

ಅನುಬಂಧ–1

ವಿಧಾನ ಸಭೆ ಪ್ರಶ್ನೆ ಸಂಖ್ಯೆ: 512

2009–10ನೇ ಸಾಲಿಗೆ ಕೃಷಿ ಇಲಾಖೆಯ ವತಿಯಿಂದ ರೈತರಿಗೆ ಪರಿಚಯಿಸಲಾಗುವ ವಿವಿಧ ಯೋಜನೆಗಳು

ಕ್ರ.ಸಂ.	ಯೋಜನೆಗಳ ಹೆಸರು
1	ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ
2	ಮಣ್ಣು ಆರೋಗ್ಯ ಕೇಂದ್ರಗಳು
3	ಕೀಟನಾಶಕ ನಿಯಂತ್ರಣ ಪ್ರಯೋಗಶಾಲೆ
4	ಹತ್ತಿಯ ಬಗ್ಗೆ ತಾಂತ್ರಿಕ ಆಯೋಗದಡಿ ಕಿರು ಆಯೋಗ–II-(ಕೇಂದ್ರ ಪುರಸ್ಕೃತ)
5	ವಿಸ್ತೃತ ನೀರಾವರಿ ಕಾರ್ಯಕ್ರಮ (ಕೇಂದ್ರ ಪುರಸ್ಕೃತ)
6	ಬೇಸಾಯ ಸಂಬಂಧಿತ ಚಟುವಟಿಕೆಗಳು
7	ಎಣ್ಣೆ ಕಾಳುಗಳ ಉತ್ಪಾದನಾ ಕಾರ್ಯಕ್ರಮ – ಕೇಂದ್ರ ಪುರಸ್ಕೃತ
8	ಇತರೆ ಕೃಷಿ ಯೋಜನೆಗಳು – ಕೃಷಿ ಪಂಡಿತ್ ಹಾಗೂ ಕೃಷಿ ಪ್ರಶಸ್ತಿ
9	ಸಾವಯವ ಕೃಷಿ
10	ನೂತನ ಕೃಷಿ ಉತ್ತೇಜನ ಯೋಜನೆ – ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಸಂಸ್ಕರಣೆ